**ದಿನಾಂಕ 27/01/2025 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಶ್ರೀ.ಕೆ.ಎಸ್ ಆರೋಪಿ ಪರ ವಕೀಲರಿಂದಃ**

ದೂರುದಾರ ಗೌರಮ್ಮ ಹಾಗೂ ಆರೋಪಿ ಅಕ್ಕ ತಂಗಿಯರು. ನಾನು ದೂರುದಾರರಿಂದ ವಿಶೇಷ ಅಧಿಕಾರ ಪತ್ರವನ್ನು ಈ ಪ್ರಕರಣವನ್ನು ನಡೆಸಲು ಪಡೆದುಕೊಂಡಿರುತ್ತೇನೆ. ದೂರುದಾರರಿಗೆ ನಾನು ತಂಗಿಯಾಗಬೇಕು. ಗೌರಮ್ಮ ಪ್ರಸ್ತುತ ಮೈಸೂರಿನಲ್ಲಿ ವಾಸವಾಗಿದ್ದಾರೆ. ಕಳೆದ ಎರಡು ವರ್ಷಗಳಿಂದ ಅವರು ಮೈಸೂರಿನಲ್ಲಿ ವಾಸವಾಗಿದ್ದಾರೆ. ದಿ.20.09.2022 ರಂದು ಗೌರಮ್ಮ ಬೆಂಗಳೂರಿನ ಕೆ.ಆರ್.ಪುರಂ ನಲ್ಲಿ ವಾಸವಿದ್ದರು. ಪ್ರಸ್ತುತ ಪ್ರಕರಣ ದಾಖಲು ಮಾಡುವ ಸಂದರ್ಭದಲ್ಲಿ ಗೌರಮ್ಮ ಬೆಂಗಳೂರಿನಲ್ಲಿ ವಾಸವಿದ್ದರು ಎಂದರೆ ಸರಿ. ಸದರಿ ಸಮಯದಲ್ಲಿ ಗೌರಮ್ಮ ನವರಿಗೆ ಆರೋಗ್ಯ ಸರಿಯಿಲ್ಲ ಎಂಬ ಕಾರಣದಿಂದ ನ್ಯಾಯಾಲಯಕ್ಕೆ ಬರಲು ಆಗುತ್ತಿಲ್ಲ ಎಂಬುದರ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿ.ಪಿ-1 ದಾಖಲೆಯನ್ನು ಗೌರಮ್ಮ ರವರ ಮಗಳು ಗೌರಮ್ಮ ರವರ ನಿರ್ದೇಶನದ ಮೇರೆಗೆ ಕೆ.ಆರ್.ಪುರಂ ನಲ್ಲಿ ರೆಡಿ ಮಾಡಿಸಿರುತ್ತಾರೆ. ನಿ.ಪಿ-1ರಲ್ಲಿನ 3ನೇ ಪುಟದಲ್ಲಿರುವ ನಿರ್ಮಲಾ.ಬಿ ಎಂಬ ಬರವಣಿಗೆ ಮೇಲಿರುವ ಸಹಿ ನನ್ನದೇ ಎಂದು ಸಾಕ್ಷಿಯು ನುಡಿದ ಮೇರೆಗೆ, ಅದನ್ನು **ನಿ.ಪಿ-1(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು, ಬರವಣಿಗೆಯಲ್ಲಿ ನಿರ್ಮಲಾ.ಬಿ ಎಂದು ತಾನು ಬರೆದಿಲ್ಲ ಎಂದು ನುಡಿದಿರುತ್ತಾರೆ. ಬನಶಂಕರಿಯಿಂದ ಕೆ.ಆರ್.ಪುರಂ ಗೆ ಸುಮಾರು 25 ಕಿ.ಮೀ ಅಂತರವಿದೆ. ಆ ದಿನ ಗೌರಮ್ಮ ರವರು ಬನಶಂಕರಿಗೆ ಬಂದಿರಲಿಲ್ಲ. ನಿ.ಪಿ-1ಕ್ಕೆ ಸಂಬಂಧಿಸಿದಂತೆ ನಾನಾಗಲೀ ಗೌರಮ್ಮ ರವರಾಗಲೀ ನೋಟರಿ ಪುಸ್ತಕದಲ್ಲಿ ಸಹಿ ಅಥವಾ ಹೆಬ್ಬೆಟ್ಟು ಹಾಕಿಲ್ಲ. ನಿ.ಪಿ-1 ನಾನು ಸೃಷ್ಟಿಸಿರುವ ದಾಖಲೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ನಿ.ಪಿ-1 ತಯಾರು ಮಾಡಿಸಿದ್ದು ಗೌರಮ್ಮ ರವರು, ಅದನ್ನು ಎಲ್ಲಿ ತಯಾರು ಮಾಡಿಸಿದರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿ.ಪಿ-1 ತಯಾರಾಗುವ ಸಮಯದಲ್ಲಿ ನಾನು ನೋಟರಿ ಮುಂದೆ ಹಾಜರಿದ್ದು ಸಹಿ ಮಾಡಿಲ್ಲ ಎಂದರೆ ಸರಿ. ನಿ.ಪಿ-1 ಸೃಷ್ಟಿತ ದಾಖಲೆಯಾಗಿರವ ಕಾರಣ ಗೌರಮ್ಮ ರವರ ಪರವಾಗಿ ನಾನು ಈ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಅಧಿಕಾರ ಹೊಂದಿಲ್ಲ ಎಂದರೆ ಸರಿಯಲ್ಲ.

**02.** ಪ್ರಸ್ತುತ ಪ್ರಕರಣದಲ್ಲಿರುವ ಚೆಕ್ಕುಗಳಿಗೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸುವಂತೆ ಅಧಿಕಾರ ನಿ.ಪಿ-1ರ ಮೂಲಕ ಗೌರಮ್ಮ ನನಗೆ ನೀಡಿದ್ದಾರೆ. ಪ್ರಸ್ತುತ ಪ್ರಕರಣದಲ್ಲಿರುವ ಚೆಕ್ಕುಗಳಿಗೆ ಸಂಬಂಧಸಿದಂತೆ ಹಾಗೂ ಅರದಲ್ಲಿ ಬರೆದಿರುವ ಮೊತ್ತಕ್ಕೆ

This is a True Copy of the Court Records Online. Authenticated @ districts.ecourtsindia.com/cnr/KABC030015222023/truecopy/order-1.pdf

www.ecourtsindia.com

ಆರೋಪಿ ವಿರುದ್ಧ ಪ್ರಕರಣ ದಾಖಲಿಸುವಂತಹ ಅಧಿಕಾರ ಗೌರಮ್ಮ ನನಗೆ ನೀಡಿಲ್ಲ ಹಾಗೂ ಆ ರೀತಿ ನಿ.ಪಿ-1ರಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. ನಿ.ಪಿ-1ರಲ್ಲಿ ಪ್ರಸ್ತುತ ಪ್ರಕರಣದ ಚೆಕ್ಕುಗಳು ಅಮಾನ್ಯಗೊಂಡ ಬಗ್ಗೆ ಹಾಗೂ ಗೌರಮ್ಮ ಆರೋಪಿಗೆ ನೋಟೀಸುವ ನೀಡಿರುವ ಬಗ್ಗೆ ನಮೂದು ಮಾಡಲಾಗಿದೆ. ಈ ರೀತಿ ನನಗೆ ಗೌರಮ್ಮ ಅಧಿಕಾರ ನೀಡಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಗೌರಮ್ಮ ನನಗೆ ಪ್ರಸ್ತುತ ಚೆಕ್ಕುಗಳ ಮೇಲೆ ಪ್ರಕರಣ ಹೂಡುವಂತೆ ಅಧಿಕಾರ ನೀಡಿರುವ ದಾಖಲೆ ನಿ.ಪಿ-1 ದಾಖಲೆ ಅಲ್ಲ ಎಂದರೆ ಸಾಕ್ಷಿಯು ಅದು ನನ್ನ ವಕೀಲರ ಬಳಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆಯಿಲ್ಲ.

**03.** ನನ್ನ ಹಾಗೂ ಆರೋಪಿ ನಡುವೆ ಸುವಾರು ಮೂರು ವರ್ಷಗಳಿಂದರೆ ಅಂದರೆ ಪ್ರಸ್ತುತ ಪ್ರಕರಣದಲ್ಲಿರುವ ಹಣ ಆರೋಪಿ ಪಡೆದುಕೊಂಡ ನಂತರ ವೈಮನಸ್ಸು ಇದೆ. ಗೌರಮ್ಮ ಹಾಗೂ ಆರೋಪಿಯ ನಡುವೆ 3-4 ವರ್ಷಗಳಿಂದ ಕೌಟುಂಬಿಕ ಕಲಹ ಹಾಗೂ ವೈಮನಸ್ಸು ಇದೆ. ನಮ್ಮ ಹಾಗೂ ಆರೋಪಿ ನಡುವೆ ಪರಸ್ಪರ ವೈಯಕ್ತಿಕ ನಿಂದನೆಗಳು ಆಗುವುದು ಇದೆ ಎಂದರೆ ಸರಿಯಲ್ಲ. ಗೌರಮ್ಮ ರವರು ಗೃಹಿಣಿ. ಅವರು ಆದಾಯ ಬರುವಂತಹ ಕೆಲಸ ಮಾಡುತ್ತಿರಲಿಲ್ಲ. ಸಾಕ್ಷಿಯು ಮುಂದುವರೆದು, ಅವರಿಗೆ ಪಿಂಚಣಿ ಹಣ ಬರುತ್ತದೆ ಎಂದು ನುಡಿಯುತ್ತಾರೆ. 2018 ರಿಂದ 2020ರ ವರೆಗೂ ಗೌರಮ್ಮ ರವರಿಗೆ ಎಷ್ಟು ಪಿಂಚಣಿ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಗೌರಮ್ಮ ರವರ ಮಾಸಿಕ ಖರ್ಚಿನ ಬಗ್ಗೆ ನನಗೆ ಗೊತ್ತಿಲ್ಲ.

**04.** ಆರೋಪಿ City Municipal Corporation ನಲ್ಲಿ ನೌಕರರು ಎಂದರೆ ಸರಿ. ಅವರಿಗೆ ಸ್ವಂತ ಮನೆ ಇತ್ತು, ಅದರಿಂದಲೂ ಸಹ ಅವರಿಗೆ ಬಾಡಿಗೆ ಬರುತ್ತಿತ್ತು ಎಂದರೆ ಸರಿ. ಅರೋಪಿಗೆ ಮಾಸಿಕ ರೂ.35,000/- ನಿವೃತ್ತಿಯ ನಂತರ ಪಿಂಚಣಿ ಬರುತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಆರೋಪಿಯು ಕೆಲಸದಿಂದ ಸೆಸ್ಪೆಂಡ್ ಆಗಿದ್ದರು ಎಂದು ನುಡಿಯುತ್ತಾರೆ. ಅವರು ಯಾವ ವರ್ಷ ಸಸ್ಪೆಂಡ್ ಆದರು ಎಂದು ನಿಖರವಾಗಿ ನನಗೆ ಗೊತ್ತಿಲ್ಲ. ಆರೋಪಿ ನೌಕರಿಯಲ್ಲಿ ಇದ್ದ ಸಮಯದಲ್ಲಿ ಆರೋಪಿಗೂ ಗೌರಮ್ಮ ರವರಿಗೊ ಇದ್ದ ವ್ಯವಹಾರದ ಬಗ್ಗೆ ನಿಮಗೆ ಗೊತ್ತಿದೆಯೇ? ಎಂಬ ಪ್ರಶ್ನೆಗೆ, ಸಾಕ್ಷಿಯು ಆ ಸಮಯದಲ್ಲಿ ಅವರಿಬ್ಬರಿಗೂ ಯಾವುದೇ ಹಣಕಾಸಿನ ವ್ಯವಹಾರ ಇರಲಿಲ್ಲ ಎಂದು ನುಡಿಯುತ್ತಾರೆ. ಗೌರಮ್ಮ

This is a True Copy of the Court Records Online. Authenticated @ districts.ecourtsindia.com/cnr/KABC030015222023/truecopy/order-1.pdf

www.ecourtsindia.com



ಹಾಗೂ ಆರೋಪಿಗೆ ಹೋಲಿಸಿಕೊಂಡರೆ ಆರೋಪಿಯೇ ಆರ್ಥಿಕವಾಗಿ ಸ್ಥಿತಿವಂತರಾಗಿದ್ದರು ಎಂದರೆ ಸರಿಯಲ್ಲ.

**05.** ಗೌರಮ್ಮ ರವರ ಕಷ್ಟಕ್ಕೆ ಆರೋಪಿಯು ಎಂದಿಗೂ ಸ್ಪಂದಿಸಿಲ್ಲ. ಪ್ರಸ್ತುತ ಆರೋಪಿತ ಪ್ರಕರಣದ ವ್ಯವಹಾರ ಹೊರತುಪಡಿಸಿ ಗೌರಮ್ಮ ಹಾಗೂ ಆರೋಪಿಯ ನಡುವೆ ಬೇರೆ ವ್ಯವಹಾರ ಇದ್ದ ಬಗ್ಗೆ ದಾಖಲೆಯಿಲ್ಲ. ಆರೋಪಿಗೆ ಮೂರು ಜನ ಮಕ್ಕಳು. ಈ ಹಿಂದೆ ಆರೋಪಿಯ ಮೂರನೇ ಮಗುವಿಗೆ ಗೌರಮ್ಮ ರವರು ಶಿಕ್ಷಣ ಕೊಡಿಸುವ ಸಂಬಂಧ ಸಹಾಯ ಮಾಡಿರುವುದಿಲ್ಲ. ಆರೋಪಿಯ ಮೊದಲನೇ ಮಗ ಬಿ.ಕಾಂ ಪದವಿ ಪಡೆದು ಕೆಲಸದಲ್ಲಿ ಇದ್ದಾರೆ ಎಂದರೆ ಸರಿ. ಎರಡನೇ ಮಗ ಆಟೋ ಓಡಿಸುತ್ತಾರೆ. ಇವರಿಬ್ಬರೂ ಸುಮಾರು 15 ವರ್ಷಗಳಿಂದ ದುಡಿಯುತ್ತಿದ್ದಾರೆ ಎಂದರೆ ಸರಿ. ಮೂರನೇ ಮಗ ಬಿ.ಕಾಂ ಓದುತ್ತಿದ್ದಾನೆ. ಈಗ ಯಾವ ವರ್ಷದ ಬಿ.ಕಾಂ ಹಾಗೂ ಯಾವ ಕಾಲೇಜಿನಲ್ಲಿ ಓದುತ್ತಿದ್ದಾನೆ ಹಾಗೂ ಎಷ್ಟು ಫೀಸ್ ಕಟ್ಟುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ.

**06.** ಗೌರಮ್ಮ ರವರು ತಮ್ಮ ವೈಯಕ್ತಿಕ ಖರ್ಚಿಗೆ ಹಣವನ್ನು ಬ್ಯಾಂಕಕಿನಿಂದ ವಿತ್ ಡ್ರಾ ಮಾಡಿಕೊಳ್ಳುತ್ತಿದ್ದರು. ಸದರಿ ಹಣದಿಂದ ಗೌರಮ್ಮ ರವರು ತಮ್ಮ ವೈಯಕ್ತಿಕ ಖರ್ಚು ಹಾಗೂ ಮನೆಯ ಬಾಡಿಗೆಯನ್ನು ನೋಡಿಕೊಳ್ಳುತ್ತಿದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು ಗೌರಮ್ಮ ರವರ ಇಬ್ಬರು ಮಕ್ಕಳು ಮನೆಯ ಬಾಡಿಗೆ ಹಾಗೂ ಖರ್ಚುಗಳನ್ನು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ದಿ.11.09.2020 ರಂದು ರೂ.2,00,000/- ಹಣವನ್ನು ಆರೋಪಿಗೆ ನೀಡಿರುವ ಬಗ್ಗೆ ಲಿಖಿತ ದಾಖಲೆ ಯಾವುದು ಇಲ್ಲ. ಒಂದು ವೇಳೆ ಆ ರೀತಿ ಹಣ ನೀಡಿದ್ದೆ ಆದಲ್ಲಿ ಹಣ ಮುಟ್ಟಿದೆ ಎಂದು ಹೇಳಲು ಆರೋಪಿ ಕಡೆಯಿಂದ ಬರೆಸಿಕೊಳ್ಳಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ತೊಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ಮೂರು ತಿಂಗಳಲ್ಲಿ ಹಣ ವಾಪಸ್ಸು ಕೊಡುತ್ತೇನೆಂದು ಹೇಳಿರುವ ಬಗ್ಗೆ ಆರೋಪಿ ಹಾಗೂ ಗೌರಮ್ಮರ ನಮಗೆ ಯಾವುದೇ ಲಿಖಿತ ದಾಖಲೆ ಆಗಿಲ್ಲ. ಯಾವ ಯಾವ ಉದ್ದೇಶಕ್ಕೆ ಎಷ್ಟು ಹಣ ಆರೋಪಿಗೆ ಬೇಕು ಎಂದು ನನಗೆ ಗೊತ್ತಿಲ್ಲ. ಹಣಕಾಸು ವ್ಯವಹಾರ ಆಗುವ ಸಮಯದಲ್ಲಿ ಸ್ಥಳದಲ್ಲಿ ಗೌರಮ್ಮ ರವರ ಮಗ ಕಿರಣ್ ಇದ್ದರು.

This is a True Copy of the Court Records Online. Authenticated @ districts.ecourtsindia.com/cnr/KABC030015222023/truecopy/order-1.pdf

www.ecourtsindia.com



**07.** ದಿ.11.09.2020 ರಂದು ಗೌರಮ್ಮ ರವರ ಖಾತೆಯಿಂದ ಹಣ ತೆಗೆದ ನಂತರ ಪುನಃ ಎಷ್ಟು ಹಣ ಜಮೆ ಆಗಿದೆ ಎಂದು ನನಗೆ ಗೊತ್ತಿಲ್ಲ. ಗೌರಮ್ಮ ರವರು ಯಾವ ಕಾರಣಕ್ಕಾಗಿ ಹಣ ಖಾತೆಯಿಂದ ತೆಗೆದಿದ್ದಾರೆ ಹಾಗೂ ಯಾವ ಕಾರಣಕ್ಕಾಗಿ ಖಾತೆಗೆ ಹಣ ಜಮೆ ಮಾಡಿದ್ದಾರೆಂದು ವೈಯಕ್ತಿಕವಾಗಿ ನನಗೆ ಗೊತ್ತಿಲ್ಲ. ಗೌರಮ್ಮ ರವರ ವೈಯಕ್ತಿಕ ಹಣಕಾಸಿನ ಬಗ್ಗೆ ಸಾಕ್ಷಿ ಹೇಳಲು ಅವರೇ ಅರ್ಹರು ಎಂದರೆ ಸರಿ.

**(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇ.ಎ.ಒ.

13ನೇ ಆ.ಮು.ಮ.ದಂ.ನ್ಯಾ., ಬೆಂಗಳೂರು

This is a True Copy of the Court Records Online. Authenticated @ districts.ecourtsindia.com/cnr/KABC030015222023/truecopy/order-1.pdf